SRI B. G. BANAKAR.—I thank the Hon. Minister for having taken suitable action in the above matter.

KARNATAKA AGRICULTURAL CREDIT OPERATIONS AND MISCELLANEOUS PROVISIONS BILL 1974—INTRODUCTION.

SRI N. CHIKKEGOWDA (Minister for Agricultural & Animal Husbandary).—Madam Speaker, I beg to leave of the House to introduce the Karnataka Agricultural Credits Operations and Miscellaneous Provisions Bill, 1974.

MADAM SPEAKER.—The question is :

"That the leave be granted to introduce the Karnataka Agricultural Credit Operations and Miscellaneous Provisions Bill, 1974."

The motion was adopted and leave was granted.

SRI N. CHIKKEGOWDA.—Madam Speaker, I beg to introduce the Karnataka Agricultural Credit Operations and Miscellaneous Provisions Bill, 1974.

MADAM SPEAKER.—The Bill is introduced. The Bill is appended as Annexure to this volume.

ISSUE RELETING TO ESSENTIALITY CERTIFICATE FOR S. S. QUOTA.

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಅನುಮತಿ ಕೋರಿ ಒಂದು ವಿಷಯ ಹೇಳಬೇಕಾಗಿದೆ ; ಏನೆಂದರೆ ಮೊನ್ನೆ ಈ ಸಭೆಯಲ್ಲಿ ಕೈಗಾರಿಕಾ ಇಲಾಖೆಯ ಮೇಲೆ ಚರ್ಚೆಯಾದಂಥ ಕಾಲದಲ್ಲಿ ಸ್ಟೈಲ್ಸ್ ಸ್ಟೀಲ್ ಪಡೆದುಕೊಳ್ಳುವ ಬಗ್ಗೆ ಸರ್ಕಾರದವರು ಯಾರು ಯಾರಿಗೆ ಎಸೆನ್ಷಿಯಲ್ ಸರ್ಟಿಫಿಕೇಟ್ ಇಷ್ಟೂ ಮಾಡಿದ್ದಾರೆಂಬ ಬಗ್ಗೆ ವಿವರವನ್ನು ಕೊಡಬೇಕೆಂದು ಕೇಳಿದ್ದೆವು ಅದರಂತೆ ಸರ್ಕಾರದವರು ಮಾಹಿತಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅದು ಪೂರ್ಣ ವಿವರಗಳನ್ನು ನಾನು ನೋಡಿದ್ದೇನೆ. ಅದರ ಬಗ್ಗೆ...

ಅಧ್ಯಕ್ಷರು —ಅದು ಈಗತಾನೆ ಬಂದಿದೆ ಈಗ ಮಾನ್ಯ ಸದಸ್ಯರು ಅದನ್ನು ಪ್ರಶ್ನಾಪ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಅವರು ಬೇಕಾದರೆ ಅದರ ಬಗ್ಗೆ ಎರಡೂವರೆ ಗಂಟೆಗಳ ಕಾಲದ ಚರ್ಚೆಗೆ ಬನೆದು ಕಳುಹಿಸಿದರೆ, ಅದನ್ನು ನಾನು ಪರ್ಯಾಲೋಚನೆ ಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈಗಾಗಲೇ ನಾನು ಒಂದು ಕಳಿಸಿದ್ದೇನೆ. ಅದರ ಜೊತೆಗೆ ತಾವು ಹೇಳ್ದವುದನ್ನು ಸಹ ಸೇರಿಸಿ ಕಳುಹಿಸಿಕೊಡುತ್ತೇನೆ.

RAILWAY EMPLOYEES STRIKE

SRI T. R. SHAMAMNA.—Under Rule 50, I have given a notice regarding the Railway Employees Strike.....

ಶ್ರೀ ಎಚ್. ಡಿ. ದೇವೇಗೌಡ.—ಮತ್ತೊಂದು ಮುಖ್ಯವಾದ ಸಂಗತಿ ಎಂದರೆ, ಈ ಸಭೆ ಇನ್ನೂ ಎಷ್ಟು ದಿವಸ ನಡೆಯುತ್ತದೆ ಎಂಬುದು ಗೊತ್ತಿಲ್ಲ. ೧೦ನೇ ತಾರೀಖಿಗೆ ಮುಗಿದುಹೋಗಬಹುದೆಂದ್ನು ಕಾಣುತ್ತದೆ.

ಅಧ್ಯಕ್ಷರು.—ಬಿಸ್‌ನೆಸ್ ಅಡ್ವೈಸರಿ ಕಮಿಟಿಯನ್ನು ಕರೆಯುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯನ್ನು ಶನಿವಾರ ಮುಗಿಸೋಣ. ಮಾನ್ಯ ಮಂಬಿತ ಮಂತ್ರಿಗಳು ಯಾವುದೋ ವಿಷಯವನ್ನು ಚರ್ಚೆ ಮಾಡುವುದಕ್ಕೆ ಹುಬ್ಬಳ್ಳಿಗೆ ಹೋಗಿದ್ದಾರೆ. ನಿಮ್ಮ ಡಿಮ್ಯಾಂಡುಗಳನ್ನು ಬೇಕಾದರೆ ಅಷ್ಟರಲ್ಲಿ ಪಾಸುಮಾಡಿಕೊಳ್ಳಿ ನಾನೇನು ಬೇಡ ಎಂದು ಹೇಳುವುದಿಲ್ಲ. ಹೇಗೂ ಆಗಸ್ಟ್ ತಿಂಗಳಿನಲ್ಲಿ ಪ್ರೆಸಿಡೆಂಟ್ ಎಲೆಕ್ಷನ್ ನಡೆಯುತ್ತದೆ. ಆಗ ಮತ್ತೆ ಈ ಸಭೆಯನ್ನು ಕರೆಯುತ್ತಾರೆ. ಪಾಪ ಮುಖ್ಯ ಮಂತ್ರಿಗಳಿಗೆ ಬಾಕಿ ತೊಂದರೆಗಳು ಎಷ್ಟೋ ಇವೆ. ನಮಗೂ ಹೇಳಿ ಹೇಳಿ ಸಾಕಾಗಿದೆ. ಹೇಳುವುದಕ್ಕೆ ಬೇಸರವಾಗುತ್ತದೆ. ಈಗ ಗಂಗಾವತಿ ಚುನಾವಣೆ ಬೇರೆ ಇದೆ. ಆದ್ದರಿಂದ ಈ ಸಭೆಯನ್ನು ಶನಿವಾರ ಮುಗಿಸೋಣ. ಈ ಮಧ್ಯೆ ನನಗೆ ತಾವು ೨½ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ನಡೆದ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕೆಲವು ಮುನಿಬಿಲ್ಸ್ ತೆಗೆದುಕೊಳ್ಳಬೇಕು ಎನ್ನುವುದನ್ನು ಎದರು ಪಕ್ಷದ ನಾಯಕರು ಒಪ್ಪಿದ್ದರು.

ಶ್ರೀ ಎಚ್. ಡಿ. ದೇವೇಗೌಡ.—ಪ್ರಮುಖ್ಯವಾದ ವಿಷಯಗಳ ಚರ್ಚೆಗೆ ಸಭಾನಾಯಕರು ಇಲ್ಲದಿದ್ದರೆ ನಾವು ಏತಕ್ಕೆ ಇಲ್ಲಿ ಕೂತುಕೊಳ್ಳಬೇಕು. ಲೀಡರ್ ಆಗಿರುವವರಿಗೆ ಎಷ್ಟು ಘನತೆ ಗೌರವಗಳು ಇವೆಯೋ ನಮಗೂ ಅಷ್ಟೆ ಇದೆ. ಸಭಾನಾಯಕರು ಈ ಸಭೆಗೆ ಘನತೆ ಗೌರವ ಕೊಡಬೇಕು. ಅವರು ಘನತೆ ಗಾಂಭೀರ್ಯವನ್ನು ಉಳಿಸಿಕೊಳ್ಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಕೆಲವು ಬಿಲ್ಲುಗಳನ್ನು ತೆಗೆದುಕೊಳ್ಳಬೇಕು ಎಂದು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಪ್ಪಂದವಾಗಿದೆ.

ಶ್ರೀ ಎಚ್. ಡಿ, ದೇವೇಗೌಡ.—ನಾವು ಕಂಕಿತುಹೊಳ್ಳುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು.—ಇದನ್ನು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಚರ್ಚೆ ಮಾಡೋಣ ತಾವು ಇಷ್ಟೊಂದು ಕಟ್ಟುನಿಟ್ಟಾಗಿ ಹೇಳಿದರೆ ಹೇಗೆ ?

STATEMENT BY THE MINISTER FOR REVENUE.

re Concentration of theatres in Bangalore

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ತಮಗೆ ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ನನಗೆ ೨೦/೨½ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಮಾನ್ಯ ಸದಸ್ಯರು ಸ್ವಲ್ಪ ನನ್ನ ಛೇಂಬರಿಗೆ ಬಾರು ನನ್ನನ್ನು ನೋಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಚಲನಚಿತ್ರ ಮಂದಿರಗಳ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇವೆ ಎಂದು ಶ್ರೀಮಾನ್ ಚನ್ನಬಸಪ್ಪನವರು ಹೇಳಿದ್ದರು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಚಲನಚಿತ್ರ ಮಂದಿರಗಳ ಬಗ್ಗೆ ತಿಳಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ.

Madam, in regard to the notice given by the hon. Member Sri Kagodu Thimmappa under Rule 312, I wish to make the following statement :